

ರೈಟ್ ತಗೊಂಡು ಮೂರ್ ಕಿಲೋಮೀಟರ್ ಒಳಕ್ಕೆ ಹೋದ್ರೆ ನಮ್ಮೂರು ದರ್ಶನವಾಗುತ್ತೆ. ಗಡಿ ಹತ್ರಾನೇ ನಮ್ಮೂರಿನ 'ರಂಗಸ್ವಾಮಿ' ಅನ್ನೋರು ಕರು ಹಿಡ್ಕೊಂಡು ನಿಂತಿದ್ರು.

ಅವರು ಒಂಥರಾ ಹಳ್ಳಿಗರು ಹಾಕುವ ಲಾಜಿಕ್ ಪಾಯಿಂಟ್‌ಗೆ ಹೆಸರುವಾಸಿ. ಯಾವುದೇ ವಿಚಾರಗಳಿಗಾದರೂ ವಾದ ಮಾಡುತ್ತಿದ್ದರು. ಒಂಥರಾ ಪ್ರಶ್ನೆ ಮಾಡುವ ಮನಸ್ಥಿತಿ. ಅವತ್ತು ಅವರು ಗಾಯಗೊಂಡಿದ್ದ ತಮ್ಮ 'ಕರು'ವಿಗೆ ಚಿಕಿತ್ಸೆ ಕೊಡಿಸಲು, ಊರಿಂದ ಹೇಗೋ ತಿಮ್ಮನಹಳ್ಳಿ ಸಮೀಪದ ಹೊಸಳ್ಳಿಯ ದನದ ಆಸ್ಪತ್ರೆಗೆ ಹೋಗಿದ್ದರು. ಅಲ್ಲಿ ಕರುವಿಗೆ ಚಿಕಿತ್ಸೆ ಕೊಡಿಸಿ ವಾಪಸ್ ಮೊಸಳೆ ತಲುಪಲು ತಿಮ್ಮನಹಳ್ಳಿ ಗಡಿಗೆ ಬಂದು ಬೇರ್‍ಯಾವ ವಾಹನ ಸಿಗದೆ ನಾವಿದ್ದ ಬಸ್ಸಿಗೇ ಕಾದಿದ್ದರು.

ಕಂಡಕ್ಟರ್ ಮುಂದೆ ಇದ್ದರು. ರಂಗಸ್ವಾಮಿ ತನ್ನ ಕರುವನ್ನು ಹಿಡಿದುಕೊಂಡು ಬಸ್ಸಿನ ಹಿಂಬದಿ ಬಾಗಿಲಿಂದ ಹತ್ತಿ, ಹಿಂಬದಿಯ ಸೀಟಿನಲ್ಲಿ ಕೂತರು. ಅವರಿಗಿಂತ ನಾಲ್ಕು ಸೀಟು ಮುಂದೆ ನಾನಿದ್ದೆ. ಕರು ಜೊತೆ ಬಸ್ ಹತ್ತಿದ್ದನ್ನು ಕಂಡ ಕಂಡಕ್ಟರ್ ತಕ್ಷಣ ಅವರತ್ತ ಸಿಡಿಗುಂಡಿನಂತೆ ನುಗ್ಗಿ ಬಂದರು. ಕರುವನ್ನು ಬಸ್ಸಿಗೆ ಹತ್ತಿಸಿದ ವಿಚಾರಕ್ಕೆ ಅವರಿಬ್ಬರ ನಡುವೆಯೂ ವಾಗ್ವಾದ ಶುರುವಾಯಿತು. ಕರು ಗಾಬರಿಗೊಂಡಿತು.

ಕಂಡಕ್ಟರ್: ಬಸ್ಸಿನಲ್ಲಿ ಕರುವನ್ನೆಲ್ಲ ಕರೆದುಕೊಂಡು ಹೋಗೋಕೆ ಆಗಲ್ಲ. ಇದು ಸಾರ್ವಜನಿಕರಿಗಾಗಿ ಇರುವ ಬಸ್ಸು. ಇಳಿಯೋ ಕೆಳಕ್ಕೆ.

ರಂಗಸ್ವಾಮಿ: ಏನ್ ಏಕವಚನದಲ್ಲಿ ಮಾತಾಡ್ತಿದ್ದೀಯಾ? ನೆಟ್ಟಗೆ ಮಾತಾಡಲೇ.

ಕಂಡಕ್ಟರ್: ನೆಟ್ಟಗೇ ಮಾತಾಡ್ತಿರೋದು. ಇದು ಸಾರ್ವಜನಿಕರ ಬಸ್ಸು ಅಂತ ಹೇಳಿದ್ದು ಗೊತ್ತಾಗ್ಲಿಲ್ವಾ? ಹಸು, ಕರು, ಕೋಳಿಗಳಿಗೆ ಇದರಲ್ಲಿ ಜಾಗವಿಲ್ಲ.

ರಂಗಸ್ವಾಮಿ: ಹೇ... ಸಾಕ್ ಸುಮ್ನಿರೋ. ನಾನೂ ಮೊಸಳೆಯವನೇ. ನೀನ್ ಏನ್ ಓದಿದ್ದೀಯಾ ಗೊತ್ತಿಲ್ಲ. ನಾನು 8ನೇ ಕ್ಲಾಸ್‌ವರೆಗೂ ಓದಿದ್ದೀನಿ. ಬಸ್ಸಲ್ಲಿ ಏನ್ ಏನ್ ಬರೆದಿದೆ ಅಂತ ಸರಿಯಾಗಿ ನೋಡು. ಧೂಮಪಾನ ನಿಷೇಧಿಸಲಾಗಿದೆ, ಇದು ಹಿರಿಯ ನಾಗರಿಕರು, ಮಹಿಳೆಯರು, ಅಂಗವಿಕಲರು ಕೂರುವ ಜಾಗ ಅಂತಷ್ಟೇ ಬರೆದಿದೆ. ಹಸು, ಕರುವಿಗೆ ಬಸ್ಸಿನಲ್ಲಿ ಅಲೋ ಮಾಡಲ್ಲ ಅಂತ ಎಲ್ಲಿ ಬರೆದಿದೆಯಾ ತೋರಿಸು?

ಕಂಡಕ್ಟರ್: ಏನ್... ಓದಿರೋದ್ರ ಬಗ್ಗೆ ಮಾತಾಡ್ತಿದ್ದೀಯಾ. ಪಿಯುಸಿ ಆಗಿರೋದಕ್ಕೆ ಕಂಡಕ್ಟರ್ ಕೆಲಸ ಕೊಟ್ಟಿರೋದು.

ಇದಿಷ್ಟು ಆಗುವಷ್ಟರಲ್ಲಿ ಬಸ್ಸು ತಿಮ್ಮನಹಳ್ಳಿ ಗಡಿಯಿಂದ ತಿಮ್ಮನಹಳ್ಳಿಗೆ ಬಂತು. ಗಲಾಟೆ ಜೋರಾಗುತ್ತಿದ್ದಂತೆ ಡ್ರೈವರ್ರೂ ಬಸ್ ನಿಲ್ಲಿಸಿ ರಂಗಸ್ವಾಮಿ ಮೇಲೆ ಜೋರು ಮಾಡಿದ.

ರಂಗಸ್ವಾಮಿ: ಏಯ್ ಬುಡಯ್ಯ. ನಿನ್ ಸೀಟಲ್ಲಿ ನೀನ್ ಕೂತ್ಕೊಂಡ್ ಬಸ್ ಬಿಡಯ್ಯ. ನಮ್ ವಿಚಾರ ನಿನಗ್ಯಾಕೆ?

ರಂಗಸ್ವಾಮಿ ಮತ್ತು ಕಂಡಕ್ಟರ್ ಮಾತುಗಳಿಗೆ ಬಸ್ಸಲ್ಲಿದ್ದವರೆಲ್ಲ ನಗ್ತಾ ಇದ್ರೆ ಕರು ಮಾತ್ರ ಗಾಬರಿಯಾಗಿತ್ತು. ಎಷ್ಟೊತ್ತಾದ್ರೂ ಇವರಿಬ್ಬರ ಗಲಾಟೆ ನಿಲ್ತಿಲ್ಲ.

ರಂಗಸ್ವಾಮಿ: ಕರೂಗೆ ಬಸ್‌ನಲ್ಲಿ ಅಲೋ ಇಲ್ಲ ಅಂತ ಎಲ್ಲಿ ಬರೆದವ್ರೆ ತೋರ್ಸು. ಲೆಟರ್‌ನಲ್ಲಿ ಬರೆದವ್ರಾ? ಡಾಕ್ಯುಮೆಂಟ್ ಇದ್ಯಾ? ಇದ್ರೆ ತೋರ್ಸು, ನಾನೀಗಲೇ ಬಸ್ ಇಳಿದ್‌ಬುಡ್ತೀನಿ. ಅದೂ ನಮ್ಮಂತೆ ಜೀವಿ ತಾನೇ? ಅದು ಬೆಳೆದು ದೊಡ್ಡದಾದ ಮೇಲೆ ಹಾಲ್ ಕೊಟ್ರೆ ಕುಡೀತೀಯ. ಹಾಲ್ನಿಂದ ಕಾಫಿ, ಟೀ, ಮೊಸರು, ಮಜ್ಜಿಗೆ,